ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಶನಿವಾರ ದಿನಾಂಕ ೧೫ನೇ ಅಕ್ಟೋಬರ್ ೧೯೮೮ ಆಶ್ವಯುಜ ೨೩; ೧೯೧೦ ಶಕ.

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ ೯-೦೦ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ಅವರು ಪೀಠವನ್ನು ಅಲಂಕರಿಸಿದರು.]

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಕಾರ್ಯದರ್ಶಿ, (ಕರ್ನಾಟಕ ವಿಧಾನಮಂಡಲ).—ವಿಧಾನ ಪರಿಷತ್ತಿನಿಂದ ಅಂಗೀಕಾರವನ್ನು ಪಡೆದ ೧೯೮೮ನೇ ಇಸವಿಯ ಕರ್ನಾಟಕ ವಿಶ್ವವಿದ್ಯಾನಿಲಯಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಸಭೆಯು ಮುಂದಿಡಲಾಯಿತು. ಮುಂದಿನದ್ದು ಗಮನಸೆಳೆಯುವ ಸೂಚನೆ.

ಶ್ರೀ ಪಂಪಾಪತಿ.—ಅಧ್ಯಕ್ಷರೇ, ಇದು ಬಹಳ ಮುಖ್ಯವಾದ ಪ್ರಶ್ನೆ. ಇದನ್ನು ತಾವು ಕಡೆಗಣಿಸಂ ತ್ತಿದ್ದೀರಿ. ಬಗರ್‌ಹುಕುಂ ಸಾಗುವಳಿಗಾರರದ್ದು...

ಅಧ್ಯಕ್ಷರು.—ಮೊದಲು ಗಮನ ಸೆಳೆಯುವ ಸೂಚನೆ ಮುಂಗಿಯಲಿ,

ಶ್ರೀ ಪಂಪಾಪತಿ.—ಹಿಂದೆ ಸಂಮಾರು ಸಲ ಇದನ್ನು ಇಲ್ಲಿ ಎತ್ತಿದ್ದೇವೆ.

ಶ್ರೀ ಆರ್. ವೆಂಕಟರಾಮಯ್ಯ.—ಹದಿನಾಲ್ಕು ಗಮನ ಸೆಳೆಯುವ ಸೂಚನೆಗಳಿವೆ. ಇವೆಲ್ಲಾ ಯಾವಾಗ ಆಗುವುದು? ಎಲ್ಲಾ ಬಹಳ ಮುಖ್ಯವಾದ ಸಮಸ್ಯೆಗಳೇ ಆದಾದಮೇಲೆ ಗವರ್ನ್‌ಮೆಂಟ್ ಕಾರ್ಯಕಲಾಪಗಳಿವೆ ಕಳೆದ ಹಲವಾರು ಅಧಿವೇಶಗಳಿಂದ ಪ್ರತಿಸಲವೂ ಈ ಸೂಚನೆಯನ್ನು ತರುವುದು ಆಮೇಲೆ ಅಡ್ಜರ್ನ್ ಮಾಡುವುದು ಆಗುತ್ತಿದೆ. ನಿನ್ನೆಯೇ ನೋಟೀಸ್ ಕೊಟ್ಟಿದ್ದೇವೆ,

ಅಧ್ಯಕ್ಷರು.—ಶ್ರೀ ವೆಂಕಟರಾಮಯ್ಯನವರೇ, ನೀವು ಸ್ವಲ್ಪ ನನ್ನ ಮಾತನ್ನು ಕೇಳುತ್ತೀರೋ ಇಲ್ಲವೋ? ಈ ತರಹ ಮಾತನಾಡುವುದು ಸರಿಯಲ್ಲ ಈ ನಿಯಮ ೬೮ರ ನೋಟೀಸನ್ನು ಈಗ ಕೊಟ್ಟಿದ್ದೀರಿ.

ಶ್ರೀ ಆರ್. ವೆಂಕಟರಾಮಯ್ಯ.—ನಾನು ನಿನ್ನೆಯೇ ಕೊಟ್ಟಿದ್ದೇನೆ.

ಅಧ್ಯಕ್ಷರು.—ನಿನ್ನೆಯಲ್ಲ ಮೊನ್ನೆಯಲ್ಲ ಹದಿನೈದು ದಿನಗಳ ಹಿಂದೆಯೇ ಕೊಟ್ಟಿದ್ದೀರೆಂದು ತಿಳಿದುಕೊಳ್ಳಿ ಇವತ್ತು ಬೇಕಾದರೆ ಅದನ್ನು ಇಂದು ಮಧ್ಯಾಹ್ನ ತೆಗೆದುಕೊಳ್ಳೋಣ.

ಶ್ರೀ ಪಂಪಾಪತಿ.—ಇದು ಸಾಮಾನ್ಯ ಜನರ ಸಮಸ್ಯೆ ಸಾಮಾನ್ಯ ಜನರ ಬಗ್ಗೆ ನಾವು ಕಳಕಳಿಯ ಭಾವನೆಯಿಟ್ಟುಕೊಳ್ಳಬೇಕು.

ಅಧ್ಯಕ್ಷರು.—ತಾವು ಸ್ವಲ್ಪ ಕುಳಿತುಕೊಳ್ಳಿ, ಹೇಳುತ್ತೇನೆ ಸಮಾಧಾನದಿಂದ ಮಾತನಾಡುವುದನ್ನು ಕಲಿಯಿರಿ. ಎಲ್ಲರಿಗೂ ಅವಕಾಶ ಮಾಡಿಕೊಡಬೇಕು ಎನ್ನುವುದೇ ನನ್ನ ಉದ್ದೇಶ ನೀವು ಕೊಟ್ಟಿರುವ ಬಿಲ್ ಇವತ್ತು ಇದೆ. ಆಮೇಲೆ ಶ್ರೀ ಪಂಪಾಪತಿಯವರು ೬೮ರ ಪ್ರಕಾರ ನೋಟೀಸ್ ಕೊಟ್ಟಿದ್ದಾರೆ. ನಾನು ಮೊದಲೇ ಹೇಳಿದ್ದೇನೆ. ಬೇಕಾದರೆ ಗಮನ ಸೆಳೆಯುವ ಸೂಚನೆ ಅಂತ ಹೇಳಿ ಅದನ್ನು ತೆಗೆದು

ಕೊಳ್ಳೋಣವೆಂದು ಆದರೆ ಅದು ಬೇಡ ಅಂತ ಹೇಳುತ್ತಿದ್ದೀರಿ. ನಿಯಮ ೬೮ರಲ್ಲಿ ಎರಡು ನೋಟೀಸ್ ಇವೆ. ನಿಮ್ಮದನ್ನೂ ತೆಗೆದುಕೊಳ್ಳೋಣ. ಶ್ರೀ ವೆಂಕಟರಾಮಯ್ಯನವರೇ ನಿಮ್ಮದು ಬಿಲ್ ಇದೆ.

ಶ್ರೀ ಆರ್. ವೆಂಕಟರಾಮಯ್ಯ.—ಆಗುವುದಿಲ್ಲ ಸ್ವಾಮಿ ಮೊದಲು ಅದನ್ನು ತೆಗೆದು ಕೊಂಡುಬಿಡಿ.

ಅಧ್ಯಕ್ಷರು.—ಇಲ್ಲಿ ಕೇಳಿ, ಇಲ್ಲಿ ೧೯೬೬ನೇ ಇಸವಿಯ ಕರ್ನಾಟಕ ಭೂಕಂದಾಯ (ಎರಡನೆ ತಿದ್ದುಪಡಿ) ವಿಧೇಯಕ ಎಂದು ಇದೆ. ಇದನ್ನು ಶ್ರೀ ಲಕ್ಷ್ಮೀಸಾಗರ್ ಅವರು ಮಂಡಿಸುತ್ತಾರೆ...

(ಮಾನ್ಯ ಸದಸ್ಯರಾದ ಶ್ರೀ ವೆಂಕಟರಾಮಯ್ಯ ಮತ್ತು ಶ್ರೀ ಪಂಪಾಪತಿಯವರು ವಿಕಕಾಲದಲ್ಲಿ ಮಾತನಾಡಲು ಪ್ರಾರಂಭಿಸಿದರು)

ಶ್ರೀ ಆರ್. ವೆಂಕಟರಾಮಯ್ಯ.—ಇದು ಆಗುವುದಿಲ್ಲ.

ಶ್ರೀ ಪಂಪಾಪತಿ.—ಅಧ್ಯಕ್ಷರೇ...

ಅಧ್ಯಕ್ಷರು.—ನೀವು ಇಬ್ಬರೂ ಮಾತನಾಡಿದರೆ ಯಾರನ್ನು ನಾನು ಕೇಳಬೇಕು? ಹೀಗೆ ಗದ್ದಲ ಮಾಡುವುದು ಸರಿಯಲ್ಲ. ನಾನು ಹೇಳುತ್ತೇನೆ. ಗಮನ ಸೆಳೆಯುವ ಸೂಚನೆ ಎಂದು ಬೇಕಾದರೆ ಮಧ್ಯಾಹ್ನ ತೆಗೆದುಕೊಳ್ಳೋಣ. ಆ ಮೇಲೆ ೬೮ರ ಪ್ರಕಾರ...

ಶ್ರೀ ಪಂಪಾಪತಿ.- ಅದು ಬೇರೆ.

ಅಧ್ಯಕ್ಷರು.—ಇವೊತ್ತೇ ತೆಗೆದುಕೊಳ್ಳೋಣ ಎಂದು ಹೇಳಿದ್ದೇನಲ್ಲ?

ಶ್ರೀ ಪಂಪಾಪತಿ.—ಇದನ್ನು ಲಘುವಾಗಿ ಕಾಣುವುದು ಬೇಡ. ಸಂಮಾರು ಹತ್ತು ಸಾವಿರ...

(ಗೊಂದಲ)

ಅಧ್ಯಕ್ಷರು.—ಇಲ್ಲಿ ಕೇಳಿ, ನೀವು ಹತ್ತುಸಾವಿರ ಇಪ್ಪತ್ತು ಸಾವಿರ ಎಂದು ಹೇಳಿವುದು ಬೇಕಾಗಿಲ್ಲ. ಹೀಗೆ ನೀವು ಮಾತನಾಡಿದರೆ ಯಾವುದೂ ರೆಕಾರ್ಡಿಗೆ ಹೋಗುವುದಿಲ್ಲ. ಅವಕಾಶ ಕೊಡುತ್ತೇನೆ ಎಂದು ಹೇಳಿದರೂ ಕೇಳುವುದಿಲ್ಲವಲ್ಲ ನೀವು.

ಶ್ರೀ ಪಂಪಾಪತಿ.—ಬಗರ್‌ಹುಕುಂ ಸಾಗುವಳಿ ಮಾಡಿರುವ ಬಡವರ ಬಗ್ಗೆ ಚರ್ಚೆ ಮಾಡೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಗಮನ ಸೆಳೆಯುವ ಸೂಚನೆ ಆದಕೂಡಲೇ ತೆಗೆದು ಕೊಳ್ಳೋಣ. ಆಮೇಲೆ ಬೇಕಾದರೆ ನಿಯಮ ೬೮ರ ಪ್ರಕಾರ ತೆಗೆದುಕೊಳ್ಳಬಹುದು.

(ಗೊಂದಲ)

ಶ್ರೀ ಆರ್. ವೆಂಕಟರಾಮಯ್ಯ.—ಅದು ಆಗುವುದಿಲ್ಲ. ಶ್ರೀ ಖರ್ಗೆಯವರು ದಯವಿಟ್ಟು ಸಹಕರಿಸಬೇಕು ೧೪ ಗಮನ ಸೆಳೆಯುವ ಸೂಚನೆಗಳಿವೆ, ಇವತ್ತೇ ಎಲ್ಲಾ ಆಗುವುದು ಅನುಮಾನ ನಾವು ನಮ್ಮ ಮೇಲೆ ಕ್ರಮ ತೆಗೆದುಕೊಂಡರೂ ಪರವಾಗಿಲ್ಲ. ನಾವು ಇದನ್ನು ಒಪ್ಪುವುದಿಲ್ಲ. ಜನ ಎಲ್ಲಾ ಸಾಯುತ್ತಿದ್ದಾರೆ...

(ಗೊಂದಲ)

ಅಧ್ಯಕ್ಷರು.—ನೀವು ಏನೇ ಮಾತನಾಡಿದರೂ ಅದು ರೆಕಾರ್ಡಿಗೆ ಹೋಗುವುದಿಲ್ಲ....

(ಗೊಂದಲ)

ಶ್ರೀ ಪಂಪಾಪತಿ.—ನೀವು ಒಂದೊಂದು ಕಾಲಿಂಗ್ ಅಟೆನ್‌ಷನ್‌ಗೂ ಒಂದೊಂದು ಗಂಟೆ ತೆಗೆದು ಕೊಳ್ಳುತ್ತೀರಿ. ನಾವು ಎತ್ತತಕ್ಕ ವಿಷಯ ಒಬ್ಬ ವ್ಯಕ್ತಿಗೆ ಸಂಬಂಧಪಟ್ಟಿದ್ದಲ್ಲ, ಸಾಮಾನ್ಯ ಬಡವರಿಗೆ ಸಂಬಂಧಪಟ್ಟ ವಿಚಾರ ಇದು...

(ಗೊಂದಲ)

ಶ್ರೀ ಎಂ. ವೀರಪ್ಪಮೊಯ್ಲಿ.—ಸನ್ಮಾನ್ಯ ಅಧ್ಯಕ್ಷರೇ, ಈಗ ಲ್ಯಾಂಡ್ ರೆವಿನ್ಯೂ ಬಗ್ಗೆ ತಾವು ಲಿಸ್ಟ್ ಔಟ್ ಮಾಡಿದ್ದೀರಿ. ಸನ್ಮಾನ್ಯ ಸದಸ್ಯರು ಯಾವ ವಿಷಯದ ಬಗ್ಗೆ ಕಳವಳ ವ್ಯಕ್ತ ಮಾಡುತ್ತಿದ್ದಾರೆ. ಅದು ಬಹಳ ಪ್ರಾಮುಖ್ಯವಾದ ವಿಚಾರ. ಅವರು ಹೇಳಿದ ಪ್ರಕಾರ ೧೦ ಲಕ್ಷ ಮಂದಿಗೆ ಸಂಬಂಧಪಟ್ಟಿದ್ದು, ಅದನ್ನು ತಾವು ಇವತ್ತೇ ತೆಗೆದುಕೊಳ್ಳಬೇಕೆಂದು ನಮ್ಮ ಆಶಯ. ಅದೇ ರೀತಿ ನಮ್ಮದೊಂದು ಕಾಲಿಂಗ್ ಅಟೆನ್ಷನ್ ಕೂಡ ಇದೆ, ಇದು ಸುಮಾರು ೫ ಲಕ್ಷ ಮಂದಿ ಮೀನುಗಾರರಿಗೆ ಸಂಬಂಧಪಟ್ಟಿದ್ದು. ಈ ಬಡ ಮೀನುಗಾರರಿಗೆ ಸಂಬಂಧಪಟ್ಟ ಸುಮಾರು ೫೦ ಕೋಟಿ ರೂಪಾಯಿಗಳು, ಅಂದರೆ ಎರಡು ತಿಂಗಳ ವಹಿವಾಟಿಗೆ ಸಂಬಂಧಪಟ್ಟ ವಿಚಾರದ ಬಗ್ಗೆ ಕಾಲಿಂಗ್ ಅಟೆನ್ಷನ್ ಇದೆ. ಇದು ಕೂಡ ೪–೫ ದಿವಸಗಳಿಂದ ಬರುತ್ತಲೇ ಇದೆ. ಕಾಲಿಂಗ್ ಅಟೆನ್ಷನ್ ಮುಂಗಿದ ಮೇಲೆ, ಆ ಬಿಲ್ ತೆಗೆದುಕೊಂಡರೆ ಒಳ್ಳೆಯದು. ಇದಕ್ಕೆ ಎಲ್ಲರ ಸಹಕಾರ ಬೇಕು. ಏಕೆಂದರೆ ೧೦ ಲಕ್ಷ ಮಂದಿಗೆ ಸಂಬಂಧಪಟ್ಟ ವಿಚಾರ ಆದು. ನಾವೂ ಕೂಡ ಪಾನ್ಸ್ ಸದಸ್ಯರ ಜೊತೆ ಇದ್ದೇವೆ. ಯಾವ ಹೋರಾಟಕ್ಕೂ ಸಿದ್ಧ ಇದ್ದೇವೆ. ಇದು ರೈತ ಕಾರ್ಮಿಕರಿಗೆ ಸಂಬಂಧಪಟ್ಟಂತೆ ರೆಗ್ಯುಲರೈಸ್ ಮಾಡುವ ವಿಚಾರ. ಆದೇರೀತಿ ೫ ಲಕ್ಷ ಮೀನುಗಾರರು ಮಂಗಳೂರು ಮತ್ತು ಬೇರೆ ಬೇರೆ ಕಡೆಗಳಲ್ಲಿ ಅನ್ನಸತ್ಯಾಗ್ರಹ ಮಾಡುತ್ತಿದ್ದಾರೆ. ಇವತ್ತು ಅವರಿಗೆ ದಿನನಿತ್ಯ ಊಟಕ್ಕೆ ಇಲ್ಲ, ಸಮುದ್ರಕ್ಕೆ ಹೋಗಿ ಮೀನು ತರುವುದಕ್ಕೆ ಆಗುತ್ತಿಲ್ಲ. ಇಂತಹ ವಿಚಾರದಲ್ಲಿ ಇವತ್ತು ಕಾಲಿಂಗ್ ಅಟೆನ್ಷನ್ ಇದೆ. ಇದು ೪ ದಿವಸಗಳಿಂದ ಮುಂದಕ್ಕೆ ಹಾಕಿಕೊಂಡು ಬರುತ್ತಿದ್ದರೂ ಕೂಡ ನಾವು ತಾಳ್ಮೆಯಿಂದ ಇದ್ದೇವೆ, ಆದ್ದರಿಂದ ಈ ಕಾಲಿಂಗ್ ಅಟೆನ್ಷನ್ ಆದ ಕೂಡಲೇ ಲ್ಯಾಂಡ್ ರೆವಿನ್ಯೂ ಬಿಲ್ಲನ್ನು ತಾವು ಖಂಡಿತವಾಗಿ ತೆಗೆದುಕೊಳ್ಳಬೇಕೆಂದು ನಾನು ನಿವೇದನೆ ಮಾಡುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಮೀನುಗಾರರ ಬಗ್ಗೆಯೂ ನಮಗೆ ಸಹಾನೂಭೂತಿ ಇದೆ, ಅದಕ್ಕೆ ವಿರೋಧ ಇಲ್ಲ. ಆದರೆ...

(ಗೊಂದಲ)

ಅಧ್ಯಕ್ಷರು, — ನೀವು ಏನೂ ಹೇಳಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ. ಕಾಲಿಂಗ್ ಅಟೆನ್ಷನ್ ಆದ ಕೂಡಲೇ ತೆಗೆದುಕೊಳ್ಳಿರ್ಣಿ ಎಂದು ಹೇಳಿದ್ದೇನೆ. ಆದ್ದರಿಂದ ನೀವು ಎಷ್ಟೇ ಮಾತನಾಡಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ.

(ಈ ಸಂದರ್ಭದಲ್ಲಿ ಸಭಾಧ್ಯಕ್ಷರ ಆದೇಶದಂತೆ ರೆಕಾರ್ಡ್ ಮಾಡಿರುವುದಿಲ್ಲ)

ಅಧ್ಯಕ್ಷರು.—ನೀವು ಉಗ್ರಸ್ವರೂಪ ತಾಳಿದೆ, ಗದ್ದಲ ಮಾಡದೇ ಶಾಂತ ರೀತಿಯಿಂದ ಇದ್ದರೆ, ಇಡೀ ದಿವಸ ಕಾರ್ಯಕಲಾಪ ನಡೆಸೋಣ...

ಶ್ರೀ ಕೆ. ಹೆಚ್. ಪಾಟೀಲ್.—ಅಧ್ಯಕ್ಷರೇ, ಇಲ್ಲಿಯತನಕ ಶಾಂತರೀತಿಯಿಂದ ಸಭೆ ನಡೆಸಿಕೊಂಡು ಬಂದಿದ್ದೀರಿ. ಈ ದಿನದ ಸಭೆ ಮುಗಿದ ಕೂಡಲೇ ತಾವು ಸಭೆಯನ್ನು ಅಡ್ಜರ್ನ್ ಮಾಡಿ ಹೋಗುತ್ತೀರಿ, ಆಗ ಆವರ ಬಿಲ್ ಬರುವುದಿಲ್ಲ...

ಅಧ್ಯಕ್ಷರು.—ಶಾಂತ ರೀತಿಯಿಂದ, ಸೌಜನ್ಯದಿಂದ ಕುಳಿತರೆ ನಾನು ಅವಕಾಶ ಕೊಡುತ್ತೇನೆ. ಗದ್ದಲ ಮಾಡಿದರೆ, ಅನಿರ್ಧಿಷ್ಟ ಕಾಲದವರೆಗೆ ಸಭೆಯನ್ನು ಮುಂದೂಡಬೇಕಾಗುತ್ತದೆ.

(ಗೊಂದಲ)

ಶ್ರೀ ಕೆ. ಹೆಚ್. ಪಾಟೀಲ್.—ತಾವು ಒಳಗೊಂದು, ಹೊರಗೊಂದು ಮಾಡದೇ ತಮ್ಮ ಮನಸ್ಸಿನಲ್ಲಿರುವುದನ್ನು ಬಹಿರಂಗಗೊಳಿಸತಕ್ಕ ವಿವೇಕ ತಮ್ಮಲ್ಲಿದೆ. ಸದಸ್ಯರೆಲ್ಲರ ಅಭಿಪ್ರಾಯ ಆ ಬಿಲ್ ಪಾಸ್ ಆಗಬೇಕೆಂಬುದು. ಇವತ್ತು ಎಷ್ಟೇ ಹೊತ್ತಾದರೂ ಸಹಿತ ತಾವು ಆ ಬಿಲ್ ತೆಗೆದು ಕೊಳ್ಳುತ್ತೇವೆ ಎಂದು ಹೇಳಿದರೆ ಸಾಕು.

ಶ್ರೀ ಆರ್. ವೆಂಕಟರಾಮಯ್ಯ.—ಇದು ಇನ್ನೂ ಮೇಲ್ಮನೆಗೆ ಬೇರೆ ಹೋಗಬೇಕು. ಅದಕ್ಕೋಸ್ಕರ ಮೊದಲು ತೆಗೆದುಕೊಳ್ಳಿ ಎಂದು ನಾವು ಕೇಳುತ್ತಿರುವುದು...

ಅಧ್ಯಕ್ಷರು.—ಇವತ್ತಿನ ಅಜೆಂಡಾದಲ್ಲೂ ಹಾಗೂ ಶಾಸನ ರಚನೆಯಲ್ಲಿ, ಇದೂ ಕೂಡ ಇದೆ.

ಶ್ರೀ ಆರ್. ವೆಂಕಟರಾಮಯ್ಯ.—ಇದು ಅಜೆಂಡಾದಲ್ಲಿ ಇನೆ, ಅದು ಬರುತ್ತದೆಯೋ ಇಲ್ಲವೊ ಎಂಬುದು ತಮಗೆ ಗೊತ್ತಿ. ನನಗೆ ತಿಳಿದಂತೆ ಅದು ಬರುವುದಿಲ್ಲ. ಇವತ್ತು ೧೪ ಕಾಲಿಂಗ್ ಅಟೆನ್ ಷನ್ ನೋಟೀಸ್‌ಗಳಿವೆ.

ಶ್ರೀ ಜೆ. ಹೆಚ್. ಪಟೇಲ್.—ಅಧ್ಯಕ್ಷರೇ, ಸದನದ ಮುಂದಿರತಕ್ಕಂಥ ವಿಧೇಯಕವನ್ನು ಎಷ್ಟು ಹೊತ್ತಾದರೂ ಮುಗಿಸುತ್ತೇವೆ ಇವತ್ತು ಎಷ್ಟು ಹೊತ್ತಾದರೂ ಮುಗಿಸುತ್ತೇವೆ. ಅದನ್ನು ಈಗಲೇ ತೆಗೆದುಕೊಳ್ಳಬೇಕೆಂದರೆ ಹೇಗೆ? ಮಾನ್ಯ ಕೆ. ಹೆಚ್. ಪಾಟೀಲರು ಹೇಳಿದ ಹಾಗೆ, ಇದರ ಬಗ್ಗೆ ತೀರ್ಮಾನ ಮಾಡಿದ್ದೇವೆ. ಎಷ್ಟು ಹೊತ್ತಾದರೂ ಇದು ಚರ್ಚೆಯಾಗಿ ಮುಗಿಯುತ್ತದೆ. ಅದನ್ನು ಬಿಟ್ಟು ಇದನ್ನು ಈಗಲೇ ಮಾಡಿರಿ ಎಂದರೆ ಹೇಗೆ?

ಶ್ರೀ ಆರ್. ವೆಂಕಟರಾಮಯ್ಯ.—ಇಂತಹ ಭರವಸೆಯನ್ನು ತಾವೇ ಅಲ್ಲ ಚೀಫ್ ಮಿನಿಸ್ಟರ್ ರವರೂ ಆರು ಸಲ ಕೊಟ್ಟಿದ್ದಾರೆ. ಕಡೇ ದಿವಸ ತರುವುದು ಟೈಮ್ ಆಗುವುದಿಲ್ಲ ಎಂದು ಹೇಳಿ ಹೋಗುವುದು, ಇದರಿಂದ ನಿಮ್ಮಲ್ಲಿ ನಮಗೆ ನಂಬಿಕೆ ಇಲ್ಲವಾಗಿದೆ.

ಅಧ್ಯಕ್ಷರು.—ನೀವು ಸರಕಾರ ಹೇಳಿದ್ದನ್ನೂ ಕೇಳುವುದಕ್ಕೆ ತಯಾರಾಗಿಲ್ಲ, ವಿರೋಧ ಪಕ್ಷದ ಅನುಭವಸ್ಥ ನಾಯಕರು ಹೇಳಿದ್ದನ್ನು ಕೇಳುವುದಕ್ಕೂ ತಯಾರಾಗಿಲ್ಲ, ನಾನು ಹೇಳಿದ್ದನ್ನು ಕೇಳುವುದಕ್ಕೂ ತಯಾರಾಗಿಲ್ಲ, ಗದ್ದಲ ಆಥವಾ ಜಗಳ ಮಾಡುವುದು ನಿಮ್ಮ ಉದ್ದೇಶ. ಪಾಪ ಬೇರೆಯವರು ಈ ಕಾಲಿಂಗ್ ಅಟೆನ್‌ಷನ್‌ಗೋಸ್ಕರ ಐದಾರು ದಿವಸದಿಂದ ಕಾಯುತ್ತಿದ್ದಾರೆ.

ಶ್ರೀ ಪಂಪಾಪತಿ.—ಆದರೆ ಅಲ್ಲಿ ಬಗರ್ ಹುಕುಮ್ ಸಾಗಂವಳಿದಾರರನ್ನು ಪೋಲೀಸರು ಜೈಲಿಗೆ ಹಾಕುತ್ತಿದ್ದಾರೆ.

ಅಧ್ಯಕ್ಷರು.—ನೀವು ಏನೇ ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ. ಪೇಪರ್‌ಗೂ ಹೋಗುವುದಿಲ್ಲ. Whatever you have said it is expunged. ಸಾಧ್ಯವಾದಷ್ಟು ಪಂಟ್ಟಿಗೆ ಅಜೆಂಡಾದಲ್ಲಿರುವ ಎಲ್ಲಾ ವಿಷಯಗಳನ್ನೂ ತೆಗೆದುಕೊಂಡು ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳಿದ್ದೇನೆ. ಈಗ ದಯವಿಟ್ಟು ಕುಳಿತುಕೊಳ್ಳಿ. ಈಗ ಕಾಲಿಂಗ್ ಅಟೆನ್‌ಷನ್ಸ್ ತೆಗೆದುಕೊಳ್ಳೋಣ.

ಶ್ರೀ ಎಂ. ವೀರಪ್ಪಮೊಯಿಲಿ.—ಕಾಲಿಂಗ್ ಅಟೆನ್‌ಷನ್ಸ್ ಎಲ್ಲವೂ ಸಾಮಾನ್ಯ ಜನರಿಗೆ ಸಂಬಾಧ ಪಟ್ಟಿದ್ದೇ.

ಶ್ರೀ ಆರ್. ವೆಂಕಟರಾಮಯ್ಯ.—ಇದಕ್ಕೆ ನಮ್ಮದೇನೂ ವಿರೋಧ ಇಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ.—ಮತ್ತೆ ಧರಣಿ ಮಾಡುತ್ತೇವೆಂದು ಏತಕ್ಕೆ ಹೇಳುತ್ತೀರಿ, ಸರಕಾರವನ್ನು ಆಗ್ರಹಪಡಿಸುವುದಕ್ಕೆ ಈ ರೀತಿ ಮಾಡುತ್ತೀರಿ, ಅವರು ಇವತ್ತು ತೆಗೆದುಕೊಳ್ಳೋಣ ಎಂದು ಹೇಳುತ್ತಿದ್ದಾರೆ. ನಾವೂ ನಿಮ್ಮ ಜೊತೆಗೆ ಇದ್ದೇವೆ.

ಶ್ರೀ ಆರ್. ವೆಂಕಟರಾಮಯ್ಯ.—೧೦ ಲಕ್ಷ ಜನರ ಸಮಸ್ಯೆ ಇದು. ಒಬ್ಬರದಾದರೆ ತಂಟೆ ಇರಲಿಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ.—ಗಮನ ಸೆಳೆಯುವ ಸೂಚನೆಗಳು ಒಂದು ಗಂಟೆಯಲ್ಲಿ ಮುಗಿದು ಹೋಗುತ್ತದೆ.

ಶ್ರೀ ಪಂಪಾಪತಿ.—ಅಧ್ಯಕ್ಷರೇ, ಇವತ್ತು ಎಷ್ಟು ಹೊತ್ತಾದರೂ ಇದನ್ನು ಮುಗಿಸಬೇಕಿ ಸ್ವಾಮಿ.

ಶ್ರೀ ಆರ್. ವೆಂಕಟರಾಮಯ್ಯ.—ಕಾಲಿಂಗ್ ಅಟೆನ್‌ಷನ್ ಆದ ಮೇಲೆ ತೆಗೆದುಕೊಳ್ಳಬೇಕು.

ಅಧ್ಯಕ್ಷರು.—ನೋಡಿ ನೀವು ಈ ರೀತಿ ಕಂಡೀಷನ್ ಕರಾರು ಹಾಕಿದರೆ ಆಗುವುದಿಲ್ಲ, ಹಾಕುವುದಕ್ಕೆ ಸಾಧ್ಯವೂ ಇಲ್ಲ.

ಶ್ರೀ ಪಂಪಾಪತಿ.—ಸ್ವಾಮಿ, ನೀವು ಹಾಗೂ ಹೇಳುತ್ತೀರಿ, ಹೀಗೂ ಹೇಳುತ್ತೀರಿ.

ಅಧ್ಯಕ್ಷರು.—ಆದಷ್ಟೂ ಮಟ್ಟಿಗೆ ವಿಶ್ವ ಪ್ರಯತ್ನ ಮಾಡಿ ಅಜೆಂಡಾದಲ್ಲಿ ಏನಿದೆ ಅದನ್ನೆಲ್ಲಾ ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಪಂಪಾಪತಿ.—ಇದರಲ್ಲಿ ವಿಶ್ವ ಪ್ರಯತ್ನ ಏನಿದೆ, ಇದು ಬಡವರ ವಿಚಾರ.

ಅಧ್ಯಕ್ಷರು.—ನೋಡಿ. ನೀವು ಸದನದ ಸಮಯವನ್ನು ಹಾಳು ಮಾಡುತ್ತಿದ್ದೀರಿ. ಬಡವರ ಬಗ್ಗೆ ನಿಮಗಿಂತ ಹೆಚ್ಚಾಗಿ ನಮಗೆ ಅನುಕಂಪ ಇದೆ. ನಿಮ್ಮೊಬ್ಬರಿಗೇ ಇಲ್ಲ. ಎಲ್ಲರಿಗೂ ಇದೆ.

ಶ್ರೀ ಆರ್. ವೆಂಕಟರಾಮಯ್ಯ.—ಎಷ್ಟು ಹೊತ್ತಾದರೂ ಮುಗಿಸಿಕೊಡುತ್ತೇನೆ ಎಂದು ಹೇಳಿದಿರಿ. ಈಗ ವಿಶ್ವ ಪ್ರಯತ್ನ ಮಾಡುತ್ತೇನೆ ಎಂದು ಹೇಳುವುದನ್ನು ನೋಡಿದರೆ ಆದರೆ ಆಗಲಿ, ಇಲ್ಲದೇ ಹೋದರೆ ಹೋಗಲಿ ಎಂದು ಆಗುತ್ತದೆ. ತಾವು ಡೆಫಿನೆಟ್ ಆಗಿ ಇವತ್ತು ತೆಗೆದುಕೊಳ್ಳುತ್ತೇವೆಂದು ಅಷ್ಯೂರೆನ್ಸ್ ಕೊಡಬೇಕು. ಆ ರೀತಿ ಹೇಳದೇ ಹೋದರೆ ನಾವು ಬಿಡುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು.—ನೋಡಿ, ನೀವು ಈಗ ೨೦ ನಿಮಿಷ ಟೈಮ್ ಹಾಳು ಮಾಡಿರುತ್ತೀರಿ. ಇದು ಸರಿಯಲ್ಲ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಪಂಪಾಪತಿ.—ಕೆಲವು ಸಲ ಎರಡು ಗಂಟೆ ನಾಲ್ಕು ಗಂಟೆ ಹಾಳಾಗುವುದು ಗೊತ್ತಿಲ್ಲವೇ? ಬಡವರ ಬಗ್ಗೆ ೨೦ ನಿಮಿಷ ಸಮಯ ಬಹಳ ದೊಡ್ಡದೇನಲ್ಲ.

ಅಧ್ಯಕ್ಷರು.—ಈಗ ಕಾಲಿಂಗ್ ಅಟೆನ್ಶನ್ಸ್, ಅಜೆಂಡಾ ಪಟ್ಟಿಯಲ್ಲಿ ಒನೆಯವರ ಬಗ್ಗೆ ರಮಾನಾಥರೈ ಅವರು ಗಮನ ಸೆಳೆಯಬಹುದು. ಜೆ.ಹೆಚ್. ಪಟೇಲರು ಉತ್ತರ ಕೊಡುತ್ತಾರೆ.

ಗಮನ ಸೆಳೆಯೆಂಬ ಸೂಚನೆ

೯-೩೦ ಎ. ಎಂ.

ದಕ್ಷಿಣ ಕನ್ನಡ ಜಿಲ್ಲೆಯ ಭೂರಹಿತ ಕೃಷಿ ಮತ್ತು ಬಡವರಿಗೆ ಈ ಹಿಂದೆ ಕೊಡಲ್ಪಟ್ಟ ೦.೦೫ ಸೆಂಟ್ಸ್ ಮನೆ ನಿವೇಶನಕ್ಕೆ ಸ್ಥಳ ಮೌಲ್ಯ ನಿರ್ಧರಿಸಿ ವಸೂಲಿ ಮಾಡುತ್ತಿರುವುದು

(ಶ್ರೀ ಬಿ. ರಮಾನಾಥರೈರವರ ಪರವಾಗಿ ಶ್ರೀ ಬಿ. ಎ. ಉಮರಬ್ಬನವರು ಮಂತ್ರಿಗಳ ಗಮನ ಸೆಳೆದರು)

ಶ್ರೀ ಬಿ. ಎ. ಉಮರಬ್ಬ.—ಮಾನ್ಯ ಅಧ್ಯಕ್ಷರೇ ದಕ್ಷಿಣ ಕನ್ನಡ ಜಿಲ್ಲೆಯ ಭೂರಹಿತ ಕೃಷಿ ಮತ್ತು ಬಡವರಿಗೆ ಈ ಹಿಂದೆ ಕೊಡಲ್ಪಟ್ಟ ೦.೦೫ ಸೆಂಟ್ಸ್ ಮನೆ ನಿವೇಶನಕ್ಕೆ ಸ್ಥಳ ಮೌಲ್ಯ ನಿರ್ಧರಿಸಿ ವಸೂಲಿ ಮಾಡುತ್ತಿರುವ ಬಗ್ಗೆ ಮಾನ್ಯ ವಸತಿ ಹಾಗೂ ನಗರಾಭಿವೃದ್ಧಿ ಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ಆರ್ ವಿ, ದೇಶಪಾಂಡೆ.—(ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—ಮಾನ್ಯ ಅಧ್ಯಕ್ಷರೇ,

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಂದಾಯ ಇಲಾಖೆಯ ಮನೆ ನಿವೇಶನಗಳನ್ನು (ಸಾಮಾನ್ಯವಾಗಿ ೫ ಸೆಂಟ್ಸ್ ಜಾಗ) ನಿವೇಶನ ರಹಿತರಿಗೆ ಪಾರುಕೆಟ್ಟೆ ಬೆಲೆಯಲ್ಲಿ ವಿತರಣೆ ಮಾಡಿರುತ್ತದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನರಿಗೆ ವಿನಾಯಿತಿ ನೀಡಲಾಗಿದೆ. ಅಲ್ಲದೆ, ವಿಶೇಷ ಪ್ರಕರಣಗಳಲ್ಲಿ ಕೂಡ ಬೆಲೆ ಪರಿಶೀಲಿಸುವ ಅಧಿಕಾರ ಜಿಲ್ಲಾಧಿಕಾರಿಯವರಿಗೆ ಇರುತ್ತದೆ.

ಸದರಿ ನಿವೇಶನಗಳನ್ನು ಭೂ ಮಂಜೂರಾತಿ ನಿಯಮಾನುಸಾರ ಮಂಜೂರು ಮಾಡಿರುವುದರಿಂದ ನಿವೇಶನಗಳ ಬೆಲೆಯನ್ನು ಕೈ ಬಿಡಲು ಕಾನೂನು ಅವಕಾಶವಿರುವುದಿಲ್ಲ.

ಶ್ರೀ ಬಿ. ಎ. ಉಮರಬ್ಬ.—ಮಾನ್ಯ ಅಧ್ಯಕ್ಷರೇ. ಮಾನ್ಯ ಸಚಿವರು ಸಧ್ಯದ ಪರಿಸ್ಥಿತಿಯನ್ನು ನಮ್ಮ ಮುಂದೆ ಮಂಡಿಸಿದ್ದಾರೆ. ಇಲ್ಲಿರುವ ಪ್ರಶ್ನೆ ಏನೆಂದರೆ ಯಾರು ಭೂರಹಿತ ಬಡವರ್ಗದ ಜನರಿದ್ದಾರೆ, ಅವರಿಗೆ ಸರ್ಕಾರದಿಂದ ಕೇವಲ ೫ ಸೆಂಟ್ಸ್ ಜಾಗವನ್ನು ಮನೆ ನಿವೇಶನಕ್ಕೆ ಕೊಡತಕ್ಕಂಥದು